ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-5, March - April 2026, Pp. 34-39
©*IIMRD*, Mysuru

IIMRD JOURNALS

www.iimrd.com

# ಮಹಿಳೆ ಮತ್ತು ಗ್ಯಾರಂಟಿ ಯೋಜನೆ ಅಧ್ಯಯನ: ಮರಿಯಮ್ಮನಹಳ್ಳಿ ಪಟ್ಟಣ ಅನುಲಕ್ಷಿಸಿ

**ಡಾ.ದೊಡ್ಡಮನಿ ಲೋಕರಾಜ**
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಸಮಾಜಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಮರಿಯಮ್ಮನಹಳ್ಳಿ, ವಿಜಯನಗರ –ಜಿಲ್ಲೆ

**ಸಾರಾಂಶ: (Abstract)**

*ಕುಟುಂಬದ ಸರ್ವತೋಮುಖ ಬೆಳವಣಿಗೆಯಲ್ಲಿ ಮಹಿಳೆಯರ ಪಾತ್ರ ಅಮೋಘವಾದದ್ದು. ಮಹಿಳೆ ತಾಯಿಯಾಗಿ, ಅಕ್ಕಳಾಗಿ, ಸಹೋದರಿಯಾಗಿ ಹಾಗೂ ಮನೆಯಲ್ಲಿ ಪತ್ನಿಯಾಗಿ ಬಾಳು ಬೆಳಕಾಗಿರುವಳು. ಕುಟುಂಬದಲ್ಲಿ ಎಷ್ಟೇ ಕಷ್ಟ ಬಂದರೂ, ಸರಿದೂಗಿಸುವಂತಹ ಧೈರ್ಯ ಮತ್ತು ಔದಾರ್ಯತೆ ಮಹಿಳೆಯರಲ್ಲಿ ಇರುತ್ತದೆ. ಮಹಿಳೆಯರು ಕೃಷಿಯಲಿ ಬಿತ್ತನೆ, ನಾಟಿ, ಕಳೆ, ದನ –ಕರಗಳಿಗೆ ಮೇವು ಇತ್ಯಾದಿ, ಅಲೆಮಾರಿ, ಅರೆ ಅಲೆಮಾರಿ & ವಿಮುಕ್ತ ಬುಡಕಟ್ಟು ಸಮುದಾಯಗಳ ಮಹಿಳೆಯರು ಧಾರ್ಮಿಕ ಭಿಕ್ಷಾಟನೆ, ಗುಜರಿ ಸಾಮಾನುಗಳು ಆರಿಸಿಕೊಳ್ಳುವುದು, ಸಣ್ಣ ಪುಟ್ಟ ವ್ಯಾಪಾರ ಮಾಡುವರು, ಅಸಂಘಟಿತ ವಲಯಗಳಲ್ಲಿ ಅನೇಕ ಮಹಿಳೆಯರು ದುಡಿಮೆ ಕ್ಷೇತ್ರಗಳಲ್ಲಿ, ಸರ್ಕಾರಿ ಮತ್ತು ಖಾಸಗಿ ವಲಯಗಳಲ್ಲಿ ಮಹಿಳೆಯರು ಉದ್ಯೋಗ ಮಾಡುವುದರ ಮೂಲಕ ತಮ್ಮ ಕುಟುಂಬ ನಿರ್ವಹಣೆ ಮಾಡುತ್ತಿದ್ದಾರೆ. ಇಂದು ಕೃಷಿ, ಕೃಷಿ ಕೂಲಿ, ಇತ್ಯಾದಿ ವೃತ್ತಿಯಲ್ಲಿರುವ ಬಡತನದ ಕುಟುಂಬಗಳು ಜೀವನ ನಿರ್ವಹಣೆ ಮಾಡುವುದು ತುಂಬಾ ಕಷ್ಟ ಪಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರ ಜಾರಿಗೆ ತಂದ ಗ್ಯಾರೆಂಟಿ ಯೋಜನೆಗಳು ಬಡತನದ ಕುಟುಂಬಗಳು ಸಬಲೀಕರಣ ಆಗಲು ಪ್ರಮುಖ ಯೋಜನೆಯ ಆಗಿದೆ.*

**ಮುಖ್ಯಪದಗಳು (Keywords):** *ಸಮಾಜ, ಮಹಿಳೆ, ಗ್ಯಾರಂಟಿ ಯೋಜನೆಗಳು, ಲಿಂಗ ಸಮಾನತೆ, ಮರಿಯಮ್ಮನಹಳ್ಳಿ*

## ಪೀಠಿಕೆ

ಭಾರತದಲ್ಲಿ ಅನೇಕ ಮಹಿಳೆಯರಿಗೆ ಶುಚಿಯಾದ ಆಹಾರ ಮತ್ತು ಶುಭ್ರವಾದ ಬಟ್ಟೆ ಇಲ್ಲ. ಹಾಗೂ ಜೀವನ ಕೂಡ ಭದ್ರತೆ ಇಲ್ಲ. ಇನ್ನು ಬಾಲ್ಯ ವಿವಾಹ, ದೇವದಾಸಿ ಪದ್ದತಿ, ಬಸವಿ ಪದ್ಧತಿ, ಮುತ್ತು ಕಟ್ಟಿಸಿಕೊಳ್ಳುವುದು ಇತ್ಯಾದಿ ಧಾರ್ಮಿಕ ಆಚರಣೆಗಳಿವೆ. ಸಾಮಾಜಿಕ ಸಮಸ್ಯೆಗಳಾದ ಲಿಂಗ ಅಸಮಾನತೆ, ಕೌಟುಂಬಿಕ ದೌರ್ಜನ್ಯ, ಲೈಂಗಿಕ ಕಿರುಕುಳ, ವರದಕ್ಷಿಣೆ ಪದ್ಧತಿ, ವೇಶ್ಯಾವೃತ್ತಿ, ಮರ್ಯಾದೆ ಹತ್ಯೆ, ಇತ್ಯಾದಿ ಸಮಸ್ಯೆಗಳಿವೆ. ಹೆಣ್ಣು ಮಕ್ಕಳು ಮದುವೆ ಆಗಿ ಕೆಲವೇ ದಿನಗಳಲ್ಲಿ" ವಿವಾಹ ವಿಚ್ಛೇದನ " ದಿಂದ 'ಮೋಡ ಕವಿದ' ವಾತಾವರಣದಂತೆ ಜೀವನ ಆಗುತ್ತದೆ.

*Please cite this article as:* ದೊಡ್ಡಮನಿ ಲೋಕರಾಜ. (2026). ಮಹಿಳೆ ಮತ್ತು ಗ್ಯಾರಂಟಿ ಯೋಜನೆ ಅಧ್ಯಯನ: ಮರಿಯಮ್ಮನಹಳ್ಳಿ ಪಟ್ಟಣ ಅನುಲಕ್ಷಿಸಿ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(5). ಪು.ಸಂ.* 34–39

ಕೆಲವು ಮಹಿಳೆಯರ ಬದುಕು ' ಭೂಮಿ ಹಾಸಿಗೆ – ಆಕಾಶವೇ ಹೊದಿಕೆಯಾಗಿ' ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ಸಂತೆ ಮೈದಾನ, ಕೃಷಿ ಮಾರುಕಟ್ಟೆ ಇತ್ಯಾದಿ ಸ್ಥಳಗಳಲ್ಲಿ ನಿರ್ಗತಿಕರಾಗಿ ವಾಸ ಮಾಡುತ್ತಿದ್ದಾರೆ. ಮಹಿಳೆಯರ ಜೀವನವು "ಮಲ್ಲಿಗೆ ಹೂವಿನಂತೆ" ಸುಂದರವಾದ ಜೀವನವಿಲ್ಲ. ಪುರುಷರಂತೆ ಮಹಿಳೆಯರು ಕೃಷಿ, ಕೃಷಿ ಕೂಲಿ, ಅಸಂಘಟಿತ ವಲಯಗಳಲ್ಲಿ ದುಡಿಮೆ, ಸರ್ಕಾರಿ ಮತ್ತು ಖಾಸಗಿ ವಲಯ ಇತ್ಯಾದಿ ಉದ್ಯೋಗ ಕ್ಷೇತ್ರಗಳಲ್ಲಿ ಸಮನಾಗಿ ಕೆಲಸ ಮಾಡುತ್ತಿದ್ದಾಳೆ. ಕರ್ನಾಟಕ ಸರ್ಕಾರ ಜಾರಿಗೆ ತಂದ ಗ್ಯಾರಂಟಿ ಯೋಜನೆಯಲ್ಲಿ ಮಹಿಳೆಯರು ಕುಟುಂಬ ನಿರ್ವಹಣೆ ಮತ್ತು ಉದ್ಯೋಗದ ಮೂಲಕ ಸಬಲೀಕರಣ ಆಗುತ್ತಿದ್ದಾರೆ.

**ಅಧ್ಯಯನದ ಉದ್ದೇಶಗಳು :**

1. ಮರಿಯಮ್ಮನಹಳ್ಳಿ ಐತಿಹಾಸಿಕ ಹಿನ್ನೆಲೆ ಕುರಿತು ಚರ್ಚಿಸುವುದು
2. ಗ್ಯಾರಂಟಿ ಯೋಜನೆಗಳು ಕುರಿತು ಅವಲೋಕನ ಮಾಡುವುದು
3. ಗ್ಯಾರೆಂಟಿ ಯೋಜನೆಗಳು ಕುರಿತು ಚರ್ಚಿಸುವುದು
4. ಗ್ಯಾರಂಟಿ ಯೋಜನೆಗಳ ಸೌಲಭ್ಯಗಳನ್ನು ಮಹಿಳೆಯರು ಪಡೆದುಕೊಳ್ಳುವುದು ಕುರಿತು ಶೋಧಿಸುವುದು.

**ಅಧ್ಯಯನದ ವ್ಯಾಪ್ತಿ**

ವಿಜಯನಗರ ಜಿಲ್ಲೆ ಹೊಸಪೇಟೆ ತಾಲ್ಲೂಕು ಮರಿಯಮ್ಮನಹಳ್ಳಿ ಪಟ್ಟಣದಲ್ಲಿ ಡಾ. ಬಿ ಆರ್ ಅಂಬೇಡ್ಕರ್ ಕಾಲೋನಿ, ಇಂದಿರಾ ನಗರ, ವಾಲ್ಮೀಕಿ ನಗರ, ಅಜಾದ್ ಮತ್ತು ಟಿಪ್ಪು ಸುಲ್ತಾನ್ ನಗರ ಹಾಗೂ ಗಂಧೂಣಿ ನಗರ ಈ ನಗರಗಳಲ್ಲಿ (ಕಾಲೋನಿಗಳು) ಆದಿ ಕರ್ನಾಟಕ (ಮಾದಿಗ) ಅಲೆಮಾರಿ ಗೋಂಧಳಿ, ನಾಯಕ, ಮುಸ್ಲಿಂ, ಬೇಡ ಜಂಗಮರು ಈ 5 ಸಮುದಾಯಗಳಲ್ಲಿ 50 ಕುಟುಂಬಗಳನ್ನು ಅಧ್ಯಯನದಲ್ಲಿ ಒಳಪಡಿಸಲಾಗಿದೆ.

**ಅಧ್ಯಯನದ ವಿಧಾನಗಳು:**

ಸಂಶೋಧನಾ ಅಧ್ಯಯನದಲ್ಲಿ ಪ್ರಾಥಮಿಕ ಮಾಹಿತಿ ಮತ್ತು ದ್ವಿತೀಯ ಮಾಹಿತಿ ಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಇಲ್ಲಿ ಪ್ರಾಥಮಿಕ ಮಾಹಿತಿಗಳಾದ ಅವಲೋಕನ, ಪ್ರಶ್ನಾವಳಿ ಮತ್ತು ಸಂದರ್ಶನ ವಿಧಾನದ ಮೂಲಕ ಹಾಗೂ ದ್ವಿತೀಯ ಮಾಹಿತಿ ಆಧಾರಗಳಾದ ಪ್ರಕಟಿತ ಗ್ರಂಥ, ಸಂಶೋಧನಾ ಕೃತಿಗಳು, ಲೇಖನಗಳು, ದಿನಪತ್ರಿಕೆಗಳು ಹಾಗೂ ಇತರೆ ಮೂಲಗಳಿಂದ ಮಾಹಿತಿಗಳನ್ನು ಪಡೆದುಕೊಂಡು, ವೈಜ್ಞಾನಿಕವಾಗಿ ಸಂಶೋಧನಾ ಪತ್ರಿಕೆಯನ್ನು ರಚಿಸಲಾಗಿದೆ.

**ಮರಿಯಮ್ಮನಹಳ್ಳಿ ಪಟ್ಟಣದ ಕುರಿತು :**

ವಿಜಯನಗರ ಜಿಲ್ಲೆಯ ಹೊಸಪೇಟೆ ನಗರಸಭೆಯಿಂದ ಮರಿಯಮ್ಮನಹಳ್ಳಿ ಪಟ್ಟಣಕ್ಕೆ 15 ಕಿಲೋ ಮೀಟರ್ ದೂರದಲ್ಲಿದೆ. ಈ ಸ್ಥಳ ತುಂಗಭದ್ರ ನದಿ ಅಣೆಕಟ್ಟು ಸಮೀಪದಲ್ಲಿದ್ದು, ಇದು ರಾಷ್ಟ್ರೀಯ ಹೆದ್ದಾರಿ 50ರ ಸಂಪರ್ಕವನ್ನು ಹೊಂದಿದೆ. ಮರಿಯಮ್ಮನಹಳ್ಳಿ ಪಟ್ಟಣವು ಕಲೆ, ಸಾಹಿತ್ಯ, ರಂಗಭೂಮಿ, ಸಂಸ್ಕೃತಿ ಮತ್ತು ನಾಟಕ ಪ್ರಸಿದ್ಧಿ ಪಡೆದುಕೊಂಡಿದೆ. ಕರ್ನಾಟಕ ಖ್ಯಾತ ಜಾನಪದ ನೃತ್ಯ, ಗಾಯನ ಮತ್ತು ನಟಿ

ಎಂದೇ ಖ್ಯಾತ ನಾಮವನ್ನು ಹೊಂದಿರುವ ಮಂಜಮ್ಮ ಜೋಗತಿ ಇವರು ಜೋಗತಿ ನೃತ್ಯ ಮೂಲಕ ಉತ್ತರ ಕರ್ನಾಟಕದಲ್ಲಿ ಗುರುತಿಸಿಕೊಂಡಿದ್ದಾರೆ. ಇವರ ಜಾನಪದ ಕಲೆ ಮತ್ತು ಅನುಪಮ ಸೇವೆಗಾಗಿ 2021 ರಲ್ಲಿ ಭಾರತ ಸರ್ಕಾರವು ಪ್ರತಿಷ್ಠಿತ "ಪದ್ಮಶ್ರೀ " ಪ್ರಶಸ್ತಿಗೆ ಭಾಜನರಾಗಿದ್ದಾರೆ. ಮರಿಯಮ್ಮನಹಳ್ಳಿ ಪಟ್ಟಣ ಧಾರ್ಮಿಕ ಕ್ಷೇತ್ರವಾದ ಶ್ರೀ ಲಕ್ಷ್ಮೀನಾರಾಯಣ ಸ್ವಾಮಿ ಮತ್ತು ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ತುಂಬಾ ಪ್ರಸಿದ್ಧಿಯನ್ನು ಪಡೆದುಕೊಂಡಿದೆ.

ತುಂಗಭದ್ರ ಅಣೆಕಟ್ಟು ಹಿನ್ನೀರಿನ ಪುರಾತನ ಇತಿಹಾಸ ಹೊಂದಿರುವ ನಾರಾಯಣ ದೇವರ ಕೆರೆಯಿಂದ ವಲಸೆ ಬಂದಿರುವ ಈ ಗ್ರಾಮವೇ " ಮರಿಯಮ್ಮನಹಳ್ಳಿ ಆಗಿದೆ. ಮರಿಯಮ್ಮನಹಳ್ಳಿ ಗ್ರಾಮ ದೇವತೆ " ಮಾಯಮ್ಮ " ದೇವರ ಹೆಸರಿನಿಂದಾಗಿ ಈ ಪಟ್ಟಣಕ್ಕೆ ಮರಿಯಮ್ಮನಹಳ್ಳಿ ಹೆಸರು ಬಂದಿದೆ ಎಂಬುದು ಪ್ರತೀತಿ ಇದೆ. ಇಲ್ಲಿ ಶ್ರೀ ಲಕ್ಷ್ಮೀನಾರಾಯಣ ಸ್ವಾಮಿ ದೇವಸ್ಥಾನ ಪ್ರತಿಷ್ಠಾಪನೆ ಆಗಿರುವ ಹಿನ್ನೆಲೆಯಲ್ಲಿ ನಾರಾಯಣ ದೇವರ ಕೆರೆಯ ಪರಂಪರೆ ಮತ್ತು ಸಂಪ್ರದಾಯಗಳನ್ನೇ ಮುಂದುವರಿಸಿಕೊಂಡು ಹೋಗುತ್ತಿರುವುದು ವಿಶೇಷ. ಪ್ರತಿ ವರ್ಷ ಶ್ರೀ ಲಕ್ಷ್ಮೀನಾರಾಯಣ ಸ್ವಾಮಿ ಮತ್ತು ಶ್ರೀ ಆಂಜನೇಯ ಸ್ವಾಮಿ ಜೋಡಿ ರಥೋತ್ಸವ ವಿಜೃಂಭಣೆಯಿಂದ ನಡೆಯುತ್ತದೆ. ಮರಿಯಮ್ಮನಹಳ್ಳಿ ಪಟ್ಟಣವು ಉತ್ತಮ ವ್ಯಾಪಾರ ಕೇಂದ್ರವಾಗಿದೆ.

ಇಲ್ಲಿನ ಸುತ್ತಮುತ್ತಲಿನ ಬಿ. ಎಂ. ಎಂ. ಲಿಮಿಟೆಡ್, ಎಸ್, ಎಲ್, ಆರ್ ಲಿಮಿಟೆಡ್, ಸ್ಮಯರ್, ಎಂ, ಎಸ್, ಪಿ, ಎಲ್ ಲಿಮಿಟೆಡ್ ಹಾಗೂ ಇತ್ಯಾದಿ ಕೈಗಾರಿಕಾ ಕೇಂದ್ರಗಳಿವೆ (ಸ್ಟೀಲ್ ಮತ್ತು ಮ್ಯಾಗ್ನೆಸ್ ) ಇಲ್ಲಿನ ಸುತ್ತಮುತ್ತಲಿನ ಕೈಗಾರಿಕಾ ಕೇಂದ್ರಗಳು ಇರುವುದರಿಂದ ಇಲ್ಲಿನ ಸುತ್ತಮುತ್ತಲಿನ ಗ್ರಾಮದ ಜನರಿಗೆ ಉದ್ಯೋಗ ಕಲ್ಪಿಸಿದೆ. ಆದರೆ ಹೊಸಪೇಟೆ ತಾಲೂಕಿನಲ್ಲಿ ದೇವದಾಸಿ ಪದ್ಧತಿ ಆಚರಣೆ ಇದೆ. ಮರಿಯಮ್ಮನಹಳ್ಳಿ ಪಟ್ಟಣ ಪಂಚಾಯಿತಿಯಲ್ಲಿ ಪರಿಶಿಷ್ಟ ಜಾತಿ, ಅಲೆಮಾರಿ ಸಮುದಾಯಗಳು, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರು, ಸಾಮಾನ್ಯ ವರ್ಗದ ಸಮುದಾಯಗಳು ವಾಸ ಮಾಡುತ್ತಿದ್ದಾರೆ. ಅಲ್ಲದೇ ಬೇರೆ ಬೇರೆ ರಾಜ್ಯಗಳಿಂದ ವಲಸೆ ಬಂದಿರುವ ಕುಟುಂಬಗಳಿವೆ.

ಇಲ್ಲಿನ ಕಡು ಬಡತನದಲ್ಲಿರುವ ಕುಟುಂಬಗಳು ಕೃಷಿ, ಕೃಷಿ ಕೂಲಿ, ಕಟ್ಟಡ ನಿರ್ಮಾಣದಲ್ಲಿ, ತರಕಾರಿ ವ್ಯಾಪಾರ, ಗುಜರಿ ಸಾಮಾನುಗಳ ವ್ಯಾಪಾರ, ಪ್ಲಾಸ್ಟಿಕ್ ಕೊಡಪಾನ ಮಾರಾಟ, ಸೂಜಿ, ಪಿನ್ನು, ದಬ್ಬಣ, ಬಲೋನ್ ಇತ್ಯಾದಿ ಸಾಮಗ್ರಿಗಳ ಸಣ್ಣಪುಟ್ಟ ವ್ಯಾಪಾರ, ಕಿರಾಣಿ ಅಂಗಡಿ, ಮೆಡಿಕಲ್ ಸ್ಟೋರ್, ಆಟೋ ಚಾಲಕರಾಗಿ, ಪಟ್ಟಣದಲ್ಲಿ ಸ್ವಚ್ಛಗೊಳಿಸುವ ಪೌರಕಾರ್ಮಿಕರು, ಗ್ಯಾರೇಜ್, ಚಿಕನ್ ಮತ್ತು ಮಟನ್ ಅಂಗಡಿ, ವೆಲ್ಡಿಂಗ್ ಶಾಪ್, ಫುಟ್ ವೇರ್, ಇತ್ಯಾದಿ ವೃತ್ತಿಗಳಲ್ಲಿ ಕೆಲಸ ಮಾಡುವುದರ ಮೂಲಕ ತಮ್ಮ ಕುಟುಂಬ ನಿರ್ವಹಣೆ ಮಾಡುತ್ತಿದ್ದಾರೆ. 2011 ರ ಜನಗಣತಿಯ ಆಧಾರದ ಮೇಲೆ, ಹೊಸಪೇಟೆ ತಾಲ್ಲೂಕಿನ (ಈಗ ವಿಜಯನಗರ ಜಿಲ್ಲೆ) ಮರಿಯಮ್ಮನಹಳ್ಳಿ ಗ್ರಾಮದ ಜನಸಂಖ್ಯೆ 15,940 ಆಗಿದ್ದು, ಇದರಲ್ಲಿ 3,243 ಮನೆಗಳು, 7,944 ಪುರುಷರು ಮತ್ತು 7,996 ಮಹಿಳೆಯರು ಇದ್ದಾರೆ.ಮಕ್ಕಳು (0–6 ವರ್ಷಗಳು): 2,474, ಸಾಕ್ಷರತಾ ಪ್ರಮಾಣ: ~65–70% (2011 ರ ದತ್ತಾಂಶದಿಂದ ಅಂದಾಜಿಸಲಾಗಿದೆ)

**ಗ್ಯಾರೆಂಟಿ ಯೋಜನೆ :**

ಕರ್ನಾಟಕ ಸರ್ಕಾರ 2023 ಜೂನ್ 11ರಂದು " ಪಂಚ ಗ್ಯಾರಂಟಿ " ಯೋಜನೆ ಜಾರಿಗೆ ತಂದಿತ್ತು. ಜನ ಸಾಮಾನ್ಯರ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣಕ್ಕೆ ಮಹತ್ವದ ಕಾರ್ಯಕ್ರಮಗಳಾದ ಅನ್ನಭಾಗ್ಯ ಯೋಜನೆ , ಗೃಹಲಕ್ಷ್ಮಿ ಯೋಜನೆ, ಶಕ್ತಿ ಯೋಜನೆ, ಗೃಹಜ್ಯೋತಿ ಯೋಜನೆ ಮತ್ತು ಯುವ ನಿಧಿ ಯೋಜನೆ. ಈ ಯೋಜನೆಯಲ್ಲಿ ಅನ್ನ ಭಾಗ್ಯ ಯೋಜನೆ ಬಿಪಿಎಲ್ ಕುಟುಂಬಗಳಿಗೆ ತಲಾ 10 ಕೆ ಜಿ ಅಕ್ಕಿ ಉಚಿತ ವಿತರಿಸಲಾಗಿತ್ತು. ಆರಂಭದಲ್ಲಿ 5 ಕೆಜಿ ಅಕ್ಕಿ ಮತ್ತು ಉಳಿದ ಐದು ಕೆಜಿ ನಗದು ಆಃಖಿ ಹಣದ ರೂಪದಲ್ಲಿ ನೀಡಲಾಗಿತ್ತು. ಕೇಂದ್ರ ಸರ್ಕಾರದ ಒಪ್ಪಿಗೆ ಮೇರೆಗೆ 2025 ಫೆಬ್ರವರಿ ಯಿಂದ ಹಣದ ಬದಲಾಗಿ 10 ಕೆಜಿ ಅಕ್ಕಿಯನ್ನು ನೀಡಲಾಗುತ್ತದೆ. ಕರ್ನಾಟಕದಲ್ಲಿ " ಹಸಿವುನಿಂದ ಯಾರೂ ಕೂಡ ಇರಬಾರದು" ಎಂದು ಕರ್ನಾಟಕ ಸರ್ಕಾರ ಬಡತನದ ಕುಟುಂಬಗಳಿಗೆ ಮಹತ್ವದ ಯೋಜನೆ ಜಾರಿಗೆ ತಂದಿದೆ.

**ಶಕ್ತಿ ಉಚಿತ ಯೋಜನೆ :**

ಕುಟುಂಬದ ತಾಯಂದಿರು / ಯಜಮಾನಿ ತಮ್ಮ ಮನೆಯ ಜವಾಬ್ದಾರಿಯಿಂದ ಕುಟುಂಬ ನಿರ್ವಹಣೆ ಮಾಡುವುದರ ಮೂಲಕ ಉಳಿತಾಯ ಮತ್ತು ಉದ್ಯೋಗದಲ್ಲಿ ಸಾಮರ್ಥ್ಯವನ್ನು ಹೊಂದಿದ್ದಾರೆ. ಕುಟುಂಬದಲ್ಲಿ ನಡೆಯುವ ಶುಭ ಕಾರ್ಯಕ್ರಮಗಳಾದ ನಾಮಕರಣ, ಆರತಿ ಕಾರ್ಯಕ್ರಮ, ಮದುವೆ, ಹಬ್ಬ– ಜಾತ್ರೆ ಸಂದರ್ಭದಲ್ಲಿ ಕುಟುಂಬದ ಸದಸ್ಯರು ಹೋಗುವ ಬದಲು ಮಹಿಳೆಯರು ಮಾತ್ರ ಹೋಗುತ್ತಿರುವುದು ವಿಶೇಷ. ಬೇರೆ ಬೇರೆ ಸ್ಥಳಗಳಲ್ಲಿ ತಮ್ಮ ಪತಿ ಉದ್ಯೋಗ ಮತ್ತು ಮಕ್ಕಳು ವ್ಯಾಸಂಗ ಮಾಡುವ ಸಂದರ್ಭದಲ್ಲಿ ಭೇಟಿ ಮಾಡಿ ಯೋಗಕ್ಷೇಮ ವಿಚಾರಿಸುತ್ತಿದ್ದಾರೆ. ಮಹಿಳೆಯರು ಸ್ವತಂತ್ರವಾಗಿ ಬಸ್ಸಿನಲ್ಲಿ ಪ್ರಯಾಣ ಮಾಡುವುದರಿಂದ ಕುಟುಂಬದ ಕೆಲಸಗಳನ್ನು ಮಾಡಿಕೊಳ್ಳುತ್ತಿದ್ದಾರೆ. ಈ ಮೊದಲು ಶುಭ ಕಾರ್ಯಕ್ರಮಗಳಿಗೆ ಕುಟುಂಬ ಸಮೇತವಾಗಿ ಹೋಗುತ್ತಿದ್ದರು . ಇಲ್ಲವೇ ತಮ್ಮ ಕುಟುಂಬದ ಸದಸ್ಯರು ಪೂರೈಸಿಕೊಳ್ಳುತ್ತಿದ್ದರು. ಅತಿ ಮುಖ್ಯ ಕಾರ್ಯಕ್ರಮದಲ್ಲಿ ಕುಟುಂಬ ಸಮೇತವಾಗಿ ಹೋಗುವರು. ಶಕ್ತಿ ಯೋಜನೆ ಬಂದ ನಂತರ ಮಹಿಳೆಯರಿಗೆ ಮಾತ್ರ ಅನುಕೂಲವಾಗಿಲ್ಲ. ಅದು ಇಡೀ ಕುಟುಂಬದ ಸಾಮಾಜಿಕ ಮತ್ತು ಆರ್ಥಿಕ ದಿಕ್ಕು ಬದಲಾವಣೆಗೊಂಡಿದೆ.

ಅದೆಷ್ಟು ಮಹಿಳೆಯರು ಧಾರ್ಮಿಕ ಕ್ಷೇತ್ರ ಎಂದೇ ಹೆಸರುವಾಸಿಯಾದ ಧರ್ಮಸ್ಥಳವನ್ನು ನೋಡಿರುವುದಿಲ್ಲ. ಶಕ್ತಿ ಯೋಜನೆಯಿಂದ ಕುಟುಂಬ ಸಮೇತವಾಗಿ " ಶ್ರೀ ಕ್ಷೇತ್ರ ಧರ್ಮಸ್ಥಳ ಮಂಜುನಾಥ ಸ್ವಾಮಿ ದೇವರ ದರ್ಶನ " ಮಾಡಿದ್ದಾರೆ.

ಅಧ್ಯಯನಕ್ಕೆ ಒಳಪಡಿಸಿದ ಮರಿಯಮ್ಮನಹಳ್ಳಿ ಪಟ್ಟಣದಲ್ಲಿ 5 ಸಮುದಾಯದ 50 ಕುಟುಂಬಗಳಲ್ಲಿ ಕೃಷಿ, ಕೃಷಿ ಕೂಲಿ, ಮನೆ ಕೆಲಸದವರು, ಬೀದಿ ಬದಿ ವ್ಯಾಪಾರಿಗಳು, ಕಟ್ಟಡದಲ್ಲಿ ಕೆಲಸ ಮಾಡುವ ಮಹಿಳೆಯರು, ಗುಜರಿ ಸಾಮಾನ್ಯಗಳ ವ್ಯಾಪಾರ, ಸಣ್ಣ ಪುಟ್ಟ ವ್ಯಾಪಾರ ಇತ್ಯಾದಿ ಕೆಲಸ ಮಾಡುವ ಮಹಿಳೆಯರಿಗೆ ಶಕ್ತಿ ಯೋಜನೆಯಿಂದ ಹಣ ಉಳಿತಾಯ ಆಗಿದೆ. ಕರ್ನಾಟಕದಲ್ಲಿ ಮಹಿಳೆಯರು ಶಕ್ತಿ

ಯೋಜನೆಯಿಂದ ಕರ್ನಾಟಕ ಸಾರಿಗೆ ಇಲಾಖೆಯಲ್ಲಿ KSRTC (Karnataka Transport Department ) ನಲ್ಲಿ BMTC, NWKRTC, KKRTC ನಾಲ್ಕು ಸಾರಿಗೆ ನಿಗಮಗಳಿದ್ದು, ಈ ಬಸ್ಸುಗಳಲ್ಲಿ ಮಹಿಳೆಯರು 500 ಕೋಟಿ ಟಿಕೆಟ್ ಉಚಿತ ಪಡೆದುಕೊಂಡು ಪ್ರಯಾಣ ಮಾಡಿದ್ದಾರೆ. ಈ ಇಲಾಖೆಯ ವಾಹನ ಚಾಲಕರು, ನಿರ್ವಾಹಕರು, ಮೆಕಾನಿಕ್ ತಂಡದವರ ಹಾಗೂ ಅಧಿಕಾರಿಗಳ ಪರಿಶ್ರಮದ ಫಲವಾಗಿ ಶಕ್ತಿ ಯೋಜನೆಗೆ ' ಪ್ರತಿಷ್ಠಿತ ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್ ಪ್ರಶಸ್ತಿ ಬಂದಿರುವುದು ಕರ್ನಾಟಕ ಸರ್ಕಾರಕ್ಕೆ ಹೆಗ್ಗಳಿಕೆ ಆಗಿದೆ.

**ಗೃಹಲಕ್ಷ್ಮಿ ಯೋಜನೆ :**

ಮರಿಯಮ್ಮನಹಳ್ಳಿ ಪಟ್ಟಣ ಪಂಚಾಯತಿಯಲ್ಲಿ ಬಡತನದ ಕುಟುಂಬಗಳು ತಮ್ಮ ಜೀವನ ನಿರ್ವಹಣೆ ಮಾಡುವುದು ತುಂಬಾ ಕಷ್ಟಕರ ಆಗಿದೆ. ಮನೆಯಲ್ಲಿ ಬೆಂಕಿ ಪಟ್ಟಣದಿಂದ ಆಹಾರ ಸಾಮಗ್ರಿಗಳು ಖರೀದಿ ಮಾಡಿಕೊಳ್ಳಲು ಅನಿವಾರ್ಯ ಆಗಿರುತ್ತದೆ. ಮೊದಲು ಕೃಷಿ ಭೂಮಿಯಲ್ಲಿ ಹೆಚ್ಚಾಗಿ ಜೋಳ, ರಾಗಿ, ನವಣೆ ಇತ್ಯಾದಿ ದವಸ ಧಾನ್ಯಗಳು ಹಾಗೂ ತರಕಾರಿ ಬೆಳೆಯಲಾಗಿತ್ತು. ಕೃಷಿ ಪರಿವರ್ತನೆ, ಕಡಿಮೆ ಭೂಮಿ, ಹಣದ ಗುತ್ತಿಗೆ, ವಾಣಿಜ್ಯ ಬೆಳೆಗಳ ಪ್ರಭಾವ, ಕಾರ್ಖಾನೆಗಳಿಗೆ ಮಾರಾಟ ಇತ್ಯಾದಿ ಅಂಶಗಳಿಂದ ರೈತರು ದವಸ – ಧಾನ್ಯಗಳು ಬೆಳೆಯಲು ಕಡಿಮೆ ಆಯಿತು. ಇಂದು ಪ್ರತಿಯೊಂದು ದವಸ ಧಾನ್ಯಗಳನ್ನು ಖರೀದಿ ಮಾಡಿಕೊಳ್ಳಲು ಅನಿವಾರ್ಯವಾಗಿದೆ. ಮರಿಯಮ್ಮನಹಳ್ಳಿ ಪಟ್ಟಣದಲ್ಲಿ ಅಧ್ಯಯನಕ್ಕೆ ಒಳಪಡಿಸಿದ ಕುಟುಂಬಗಳು ಜೀವನ ನಿರ್ವಹಣೆ ಮಾಡುವುದು ಕಷ್ಟಪಡುತ್ತಿದ್ದಾರೆ.

ಕರ್ನಾಟಕ ಸರ್ಕಾರ ಜಾರಿಗೆ ತಂದ ಗೃಹಲಕ್ಷ್ಮಿ ಯೋಜನೆಯಿಂದ ಇಲ್ಲಿನ ಬಿಪಿಎಲ್ ಕುಟುಂಬದ ಮಹಿಳೆಯರಿಗೆ ಪ್ರತಿ ತಿಂಗಳು ರೂ.2000 ಗಳು ಹಣ ಜಮಾ ಆಗುವುದರಿಂದ ಕುಟುಂಬ ಸುಧಾರಣೆ ಆಗುತ್ತಿದೆ ಮತ್ತು ನೆಮ್ಮದಿಯಿಂದ ಬದುಕುವಂತಾಗಿದೆ. ಈ ಕುಟುಂಬಗಳು ಮನೆಯ ಗೃಹ ಉಪಯೋಗಿ ವಸ್ತುಗಳ ಖರೀದಿ ಮಾಡಿಕೊಳ್ಳುತ್ತಿದ್ದಾರೆ. ಅಲ್ಲದೇ ಮಕ್ಕಳ ವಿದ್ಯಾಭ್ಯಾಸ, ಕೃಷಿಗೆ ಬೇಕಾದ ಬೀಜ ಗೊಬ್ಬರ , ಹಬ್ಬ ಜಾತ್ರೆಗಳಿಗೆ ಹೊಸ ಬಟ್ಟೆ ಖರೀದಿ, ಆಸ್ಪತ್ರೆ ಖರ್ಚು, ಪಾತ್ರೆ ಸಾಮಾನು ಮತ್ತು ಬೆಳ್ಳಿ – ಬಂಗಾರ ಆಭರಣಗಳ ಖರೀದಿ, ಸಣ್ಣ ವ್ಯಾಪಾರಕ್ಕೆ ಬಂಡವಾಳ ಹಾಕುವುದರ ಮೂಲಕ ಸ್ವಾವಲಂಬನೆ ಬದುಕನ್ನು ಕಟ್ಟಿಕೊಂಡಿದ್ದಾರೆ. ಕೆಲವು ಮಹಿಳೆಯರು ಅಂಚೆ ಇಲಾಖೆ ಮತ್ತು ರಾಷ್ಟ್ರೀಕೃತ ಬ್ಯಾಂಕ್ ಗಳಲ್ಲಿ ಹಣ ಉಳಿತಾಯ ಮಾಡುತ್ತಿದ್ದಾರೆ. ಇಲ್ಲಿನ ಬಡತನದ ಕುಟುಂಬಗಳಲ್ಲಿ ಆಹಾರ ಪದ್ಧತಿಯಲ್ಲಿ ಬದಲಾವಣೆ ಆಗಿದೆ. ಮುಂಜಾನೆ ಊಟದ ಬದಲಾಗಿ ಇಡ್ಲಿ, ದೋಸೆ, ಪೂರಿ, ಪಲಾವ್, ಪಡ್ಡು ಇತ್ಯಾದಿ ಉಪಹಾರ ಮಾಡಿಕೊಳ್ಳುತ್ತಿರುವುದು ವಿಶೇಷವಾಗಿದೆ. ಗೃಹಜೋತಿ ಯೋಜನೆಯಲ್ಲಿ ಇಲ್ಲಿನ ಪ್ರತಿ ಮನೆಗೆ 200 ಯೂನಿಟ್ ವಿದ್ಯುತ್ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ.

**ಫಲಿತಗಳು :**

1. ಕರ್ನಾಟಕ ಸರ್ಕಾರದ 5 ಗ್ಯಾರಂಟಿ ಯೋಜನೆಗಳು ಸೌಲಭ್ಯಗಳನ್ನು ಇಲ್ಲಿನ ಕುಟುಂಬಗಳು

2. ಪಡೆದುಕೊಂಡಿದ್ದಾರೆ.
3. ಗೃಹಲಕ್ಷ್ಮಿ ಯೋಜನೆಯ ಆರ್ಥಿಕ ಸಹಾಯದಿಂದ ಇಲ್ಲಿನ ಕುಟುಂಬದಲ್ಲಿ ಮಹಿಳೆಯರು
4. ಸಬಲೀಕರಣ ಆಗುತ್ತಿದ್ದಾರೆ.
5. ಮಹಿಳೆಯರಿಗೆ ಆತ್ಮವಿಶ್ವಾಸ ಮತ್ತು ಸ್ವಾವಲಂಬನೆ ಹೆಚ್ಚಾಗಿದೆ.
6. ಕುಟುಂಬದಲ್ಲಿ ಜೀವನ ಮಾಡಲು ಭರವಸೆ ಮೂಡಿಸಿದೆ.

**ಸಮಾರೋಪ**

ಮರಿಯಮ್ಮನಹಳ್ಳಿ ಪಟ್ಟಣದಲ್ಲಿ 5 ಸಮುದಾಯಗಳಲ್ಲಿ 50 ಕುಟುಂಬಗಳು ಗ್ಯಾರೆಂಟಿ ಯೋಜನೆ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ. ಕರ್ನಾಟಕ ಸರ್ಕಾರ ಜಾರಿಗೆ ತಂದ ಗ್ಯಾರೆಂಟಿ ಯೋಜನೆಗಳು ಇಲ್ಲಿನ ಬಡತನದ ಕುಟುಂಬಗಳಿಗೆ ವರದಾನ ಆಗಿದೆ. ಮನೆಯ ಸದಸ್ಯರು ಜೇನುಗೂಡಿನಂತೆ ಇದ್ದು, ಕುಟುಂಬ ನಿರ್ವಹಣೆ ಮತ್ತು ಸ್ವಾವಲಂಬನೆಯಲ್ಲಿ ಮಹಿಳೆಯರು ಸಬಲೀಕರಣ ಆಗುತ್ತಿದ್ದಾರೆ.

**ಪರಾಮರ್ಶನ ಗ್ರಂಥಗಳು:**


- ಮಹಿಳೆ ಮತ್ತು ಆರೋಗ್ಯ, ಡಾ ಕೆ ಸರೋಜ, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2001
- ಮಹಿಳೆ ಸಾಹಿತ್ಯ ಸಮಾಜ, ವಿಜಯ ದಬ್ಬೆ, ರಚನಾ ಪ್ರಕಾಶನ ಮೈಸೂರು.
- ಭಾರತೀಯ ಸ್ತ್ರೀ ಜೀವನ, ಡಾ. ವಿಠ್ಠಲ್ ರಾವ್ ಟಿ.ಗಾಯಕ್ವಾಡ್, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2009
- ಭಾರತೀಯ ಸಮಾಜ, ಚ ನ ಶಂಕರಾವ್, ಜೈ ಭಾರತ್ ಪ್ರಕಾಶನ ಮಂಗಳೂರು, 2013
- ಭಾರತದಲ್ಲಿ ಗ್ರಾಮೀಣ ಅಭಿವೃದ್ಧಿ, ಚ ನ ಶಂಕರಾವ್, ಜೈ ಭಾರತ್ ಪ್ರಕಾಶನ ಮಂಗಳೂರು, 2013
- ಕೋವಿಡ್ 19 ಬಿಕ್ಕಟ್ಟಿನ ಒಳ– ಹೊರಗೂ, ಡಾ.ಶಕ್ತಿ ಯೋಜನೆ ಉಪಯೋಗ ಆಗಿದೆ. ಎಚ್ ಡಿ ಪ್ರಶಾಂತ್ (ಸಂ) ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2021.
- ಡಾ. ಎಂ ಚಂದ್ರ ಪೂಜಾರಿ, ಸಮಾಜ ಸಂಶೋಧನೆ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
- ಚ. ಎನ್ ಶಂಕರರಾವ್ , ಸಂಶೋಧನಾ ವಿಧಾನಶಾಸ್ತ್ರ , ಜೈ ಭಾರತ್ ಪಬ್ಲಿಷಿಂಗ್ ಹೌಸ್, ಮಂಗಳೂರು.
- ಡಿ. ಎಚ್ ಮಲ್ಲಿನಾಥಯ್ಯ,ಸಮಾಜಶಾಸ್ತ್ರ ಕೈಪಿಡಿ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು, 1984
- ಎಂ. ಶಿವಮೂರ್ತಿ, ಸಾಮಾಜಿಕ ಸಂಶೋಧನ ವಿಧಾನಗಳು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು, 1995.